ಆ) ಈ ರೀತಿ ಹೆಚ್ಚು ಮಾಡಲು ಕಾರಣಗಳೇನು ಮತ್ತು ಹೆಚ್ಚು ಮಾಡುವಾಗ ಯಾವ ಮಾಪನ ಗಳನ್ನು ಅಳವಡಿಸಲಾಗಿದೆ;

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ದಿನಾಂಕ ೩೧–೩–೧೯೯೦ಕ್ಕೆ ಪಟ್ಟಣ ಮತ್ತು ಅನೌಪಚಾರಿಕ ಪಡಿತರ ಪ್ರದೇಶಗಳಲ್ಲಿ ೨೦,೨೪,೪೬೦ ಪಡಿತರ ಚೀಟಿಗಳಿರುತ್ತದೆ. ದಿನಾಂಕ ೩೧–೧೦–೧೯೯೦ಕ್ಕೆ ಒಟ್ಟಾರೆ ೫೯,೩೭೫ ಪಡಿತರ ಚೀಟಿಗಳು ಅಧಿಕಗೊಂಡಿರುತ್ತದೆ.

ಆ) ಹೊರ ರಾಜ್ಯಗಳಿಂದ ಬಂದವರಿಗೆ ಹಾಗೂ ಪಡಿತರ ಚೀಟಿ ಹೊಂದದೆ ಇರುವವರಿಗೆ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗುತ್ತಿರುತ್ತದೆ. ಈ ಕೆಳಕಂಡ ಮಾಪನಗಳನ್ನು ಪಡಿತರ ಚೀಟಿಗಳನ್ನು ವಿತರಿಸುವಾಗ ಅಳವಡಿಸಲಾಗುತ್ತದೆ.

೧. ವಲಸೆ ಪತ್ರ/ಸ್ವೀಕೃತ ಪತ್ರ

೨. ಕಂದಾಯ ಸಂದಾಯ ರಸೀದಿ/ಬಾಡಿಗೆ ರಸೀದಿ ಪತ್ರ

೩. ಉದ್ಯೋಗದ ಪತ್ರ.

೪. ಮತದಾರರ ಪಟ್ಟಿ.

ಡೀಸಲ್ ಅಭಾವದಿಂದ ರಾಜ್ಯದಲ್ಲಿ ಕಡಿತಗೊಳಿಸಿರುವ ಬಸ್‌ಗಳ ಸಂಖ್ಯೆ ಬಗ್ಗೆ

೨೩೬ ಶ್ರೀ ಕೆ. ಹರ್ಷಕುಮಾರಗೌಡ (ಚಾಮರಾಜ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಡೀಸಲ್ ಅಭಾವದಿಂದ ರಾಜ್ಯದಲ್ಲಿ ಕಡಿತಗೊಳಿಸಿರುವ ಬಸ್‌ಗಳ ಸಂಖ್ಯೆ ಎಷ್ಟು ?

ಆ) ಇದರಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಬಂದಿದ್ದರೆ ಇದನ್ನು ಬಗೆಹರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು ?

ಈ) ಈ ಪರಿಸ್ಥಿತಿಯಿಂದ ಹೊರಬರಲು ಸರ್ಕಾರ ನಡೆಸುತ್ತಿರುವ ಪ್ರಯತ್ನವೇನು ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು).—

ಅ) ೧,೨೨೭

ಆ) ಹೌದು

ಇ) ಕಡಿತಗೊಳಿಸಿರುವ ಮಾರ್ಗಸೂಚಿಗಳಲ್ಲಿ ಶೇ. ೭೦ ರಷ್ಟನ್ನು ಅಂದರೆ ೯೧೦ ಮಾರ್ಗ ಸೂಚಿಗಳನ್ನು ಪುನರಾರಂಭಿಸಲು ಸೂಚನೆಗಳನ್ನು ನೀಡಲಾಗಿದೆ. ಇವುಗಳು ಹಂತ ಹಂತವಾಗಿ ಪುನರಾರಂಭಗೊಳ್ಳುತ್ತದೆ.

ಈ) ಯಾವುದೇ ರೀತಿಯ ಇಂಧನ ಕಡಿತವನ್ನು ರಾಜ್ಯ ಸಾರಿಗೆ ಉದ್ದಿಮೆಗಳಿಗೆ ವಿಧಿಸದೆ ಇಂಧನ ವನ್ನು ಪೂರೈಸಲು ಪೆಟ್ರೋಲಿಯಂ ಮಂತ್ರಾಲಯವನ್ನು ಸಂಪರ್ಕಿಸಲಾಗಿದೆ.

ಮಂಡ್ಯದ ಕೆ.ಎಸ್,ಆರ್.ಟಿ.ಸಿ. ಡಿಪೋದಿಂದ ಓಡಿಸುವ ಬಸ್‌ಗಳ ಬಗ್ಗೆ

೩೨೭ ಶ್ರೀ ಡಿ ಹಲಗೇಗೌಡ, (ಪಾಂಡವಪುರ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆ ಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಡಿಪೋದಲ್ಲಿ ಪ್ರಸ್ತುತ ಓಡುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು ? ಹಾಗೂ ಈ ಸಾರಿಗೆ ಡಿಪೋವಿನ ಸಿಬ್ಬಂದಿ ವರ್ಗದ ಪ್ರಮಾಣ ವೆಷ್ಟು ?

ಆ) ಬಸ್ಸುಗಳನ್ನು ಓಡಿಸುತ್ತಿರುವ ಬಗ್ಗೆ ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು ಮತ್ತು ಪಾಂಡವಪುರ ತಾಲ್ಲೂಕಿಗೆ ಓಡಿಸುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು ?

ಶ್ರೀ ಆಜೀಜ್ ಸೇಠ್ (ಸಾರಿಗೆ ಸಚಿವರು).—

ಅ) ಈಗ ಮಾಂಡ್ಯ ಡಿಪೋದಿಂದ ೪೧ ಮಾರ್ಗ ಸೂಚಿಗಳು ಸಂಚಾರ ಕಾರ್ಯ ಮಾಡುತ್ತಿವೆ. ಮಾಂಡ್ಯ ಡಿಪೋವಿನ ಸಿಬ್ಬಂದಿ ಸಂಖ್ಯೆ ೧೯೬೦ರ ಸೆಪ್ಟೆಂಬರ್ ಮಾಹೆಯ ಅಂತ್ಯದಲ್ಲಿ ಈ ಕೆಳಗಿನಂತೆ ಇರುತ್ತದೆ.

ಮಂಜೂರಾತಿ	೨೬೮
ಕಾರ್ಯ ನಿರ್ವಹಿಸುತ್ತಿರುವವರು	
ರೆಗ್ಯುಲರ್	೨೦೨
ಬದಲಿ	೩೮
ಒಟ್ಟು	೨೪೦

ಆ) ತಾಲ್ಲೂಕು ಕೇಂದ್ರಗಳಿಂದ ಎಷ್ಟು ಟ್ರಿಪ್‌ಗಳನ್ನು ಓಡಿಸಲಾಗುತ್ತಿದೆ ಎಂಬ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

೧	ಕೆ.ಆರ್. ಪೇಟೆ	೭೨
೨	ಮಳವಳ್ಳಿ	೭೪
೩	ಪಾಂಡವಪುರ	೫೧
೪	ಶ್ರೀರಂಗಪಟ್ಟಣ	೧೫೨
೫	ನಾಗಮಂಗಲ	೮೨
೬	ಮದ್ದೂರು	೮೩

ಪಾಂಡವಪುರ ತಾಲ್ಲೂಕಿನಲ್ಲಿ ೫೧ ಟ್ರಿಪ್‌ಗಳ ಸಂಚಾರ ಒದಗಿಸಲಾಗಿದೆ.

ಬೆಂಗಳೂರು ಪಶ್ಚಿಮ ವಲಯದಲ್ಲಿ ಬರುವ ನ್ಯಾಯ ಬೆಲೆ ಅಂಗಡಿಗಳ ಸಂಖ್ಯೆ ಬಗ್ಗೆ

೨೨೬. ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಪಶ್ಚಿಮ ವಲಯದ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯ ವ್ಯಾಪ್ತಿಗೆ ಬರುವ ನ್ಯಾಯಬೆಲೆ ಅಂಗಡಿಗಳು ಸಹಕಾರ ಸಂಘಗಳು ಮತ್ತು ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಪೂರೈಕೆ ನಿಗಮದ ಅಂಗಡಿಗಳ ಸಂಖ್ಯೆ ಎಷ್ಟು ? ಹಾಗೂ ಇವುಗಳು ಎಲ್ಲೆಲ್ಲಿ ಇವೆ ?

ಆ) ಜನವರಿಯಿಂದ ಪ್ರತಿ ತಿಂಗಳು ಇಲ್ಲಿಯವರೆಗೆ ಈ ಎಲ್ಲಾ ಅಂಗಡಿಗಳಿಂದ ವಿತರಣೆ ಮಾಡಲಾದ ಪಡಿತರ ವಿವರಗಳೇನು (ಪ್ರತಿಯೊಂದು ತಿಂಗಳ ಬಗ್ಗೆ ಪ್ರತ್ಯೇಕ ಮಾಹಿತಿ ನೀಡಂವುದು).

ಇ) ಈ ಅಂಗಡಿಗಳಲ್ಲಿ ಪಡಿತರ ಸರಿಯಾಗಿ ವಿತರಣೆಯಾಗುತ್ತಿರುವ ಬಗ್ಗೆ ವಲಯಾಧಿಕಾರಿಯವರೇ ಖುದ್ದಾಗಿ ಹೋಗಿ ಪರಿಶೀಲನೆ ಮಾಡಿದ್ದಾರೆಯೇ ?

ಈ) ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ?